CC-O. In Public Domain. Digitized by eGangotri

ಸಂಖ್ಯೆ ೧೬೨ ಬೆಲೆ ೧ ರೂ.

ತುಲಸೀದಾಸರು

ಎನ್. ಕೆ. ನರಸಿಂಹಮೂರ್ತಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ತುಲಸೀದಾಸರು

ಎನ್. ಕೆ ನರಸಿಂಹಮೂರ್ತಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲನೆ ಮುದ್ರಣ ೧೯೭೨ : ೩೦೦೦ ಪ್ರತಿಗಳು

ಎರಡನೆ ಮುದ್ರಣ ೧೯೭೫ : ೧೦,೦೦೦ ಪ್ರತಿಗಳು

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ತುಲಸೀದಾಸರು

ಶ್ರೀ ತುಲಸೀದಾಸರು ಹುಟ್ಟಿದ ಊರು, ದಿನಗಳ ವಿಷಯದಲ್ಲಿ ವಿದ್ವಾಂಸರಲ್ಲಿ ಭೇದವಿದೆ. ಅನೇಕ ವಿದ್ವಾಂಸರ ಅಭಿಪ್ರಾಯ ಇದು; ವಿಕ್ರಮಾರ್ಕ ಶಕೆಯ ೧೫೮೪ ಅಂದರೆ ಕ್ರಿಸ್ತಶಕ ೧೫೨೭ರಲ್ಲಿ ಉತ್ತರಪ್ರದೇಶದ ರಾಜಾಪುರ ಎಂಬಲ್ಲಿ ತುಲಸೀದಾಸರು ಹುಟ್ಟಿದರು. ಇವರ ತಂದೆ-ತಾಯಿಯ ಹೆಸರು ಕ್ರಮವಾಗಿ ಆತ್ಮಾರಾಮದುಬೆ ಮತ್ತು ಹುಲಸೀಬಾಯಿ.

ಕೆಲವೇ ದಿನಗಳ ಮಗುವಾಗಿದ್ದಾಗಲೇ ತುಲಾರಾಮ (ತುಲಸೀದಾಸರ ಮೊದಲ ಹೆಸರು) ಮಾತೆಯನ್ನು ಕಳೆದುಕೊಂಡ. ತುಲಾರಾಮನು ಕೆಟ್ಟ ನಕ್ಷತ್ರದಲ್ಲಿ ಜನಿಸಿದ ಕಾರಣವಾಗಿ, ತಂದೆಯೂ ಸಹ ತುಲಾರಾಮನನ್ನು ದೂರ ಮಾಡಿದನು. ಆಜ್ಜಿ ದುರದೃಷ್ಟ ತುಲಾರಾಮನನ್ನು ಪೋಷಿಸತೊಡಗಿದಳು.

ಅಕ್ಕಸಕ್ಕದ ಮನೆಯವರು ತುಲಾರಾಮನು ಮಗುವಾಗಿದ್ದಾಗ ತುಂಬಾ ಮನುತೆಯಿಂದ ಆಡಿಸಿ, ತಿಂಡಿ ತಿನಿಸುಗಳನ್ನು ನೀಡುತ್ತಿದ್ದರು.

ತುಲಾರಾಮು ಊರಲ್ಲಿ ಭಿಕ್ಷೆ ಬೇಡುತ್ತ ಅವರಿವರು ದಯಪಾಲಿಸಿದ ಹಣ್ಣು ಹಂಪಲುಗಳನ್ನು ತಿಂದು ಹೊಟ್ಟೆ ಹೊರೆಯುತ್ತಿದ್ದ.

ಕೆಲವು ಕಾಲವಾದ ನಂತರ ಮುದುಕಿ ಮರಣ ಹೊಂದಿದಳು. ಆಗ ತುಲಾರಾಮನಿಗೆ ಊರಿನ ಜನರೇ ಪೋಷಕರಾದರು. ಶ್ರೀರಾಮನೇ ಹುಡೆಯನಾದನು. ಭಕ್ತಾದಿಗಳು ದಯಪಾಲಿಸುವ ಪ್ರಸಾದವೇ ಇವನಿಗೆ ಊಟವಾಗಿತ್ತು. 'ನಾಲ್ಕು ಕಡಲೆಕಾಳುಗಳು ನಾಲ್ಕು ಪುರುಷಾರ್ಥಗಳಂತೆ ಬಹಳ ದುರ್ಲಭವಾಗಿದ್ದುವು'–ಎಂದು ತುಲಸೀದಾಸರು ತಮ್ಮ ಬಾಲ್ಯವನ್ನು ಸ್ಮರಿಸಿಕೊಂಡಿದ್ದಾರೆ. 'ದೇವಾಲಯವೇ ಗೃಹ, ದೇವರೇ ಮಾತಾಪಿತೃರು' ಎಂಬುದಾಗಿ ತುಲಸೀದಾಸರು ಭಾವಿಸಿದ್ದರು.

ಹಿಂದುಬಾರಿ ರಾಜಾಪುರದಲ್ಲಿ ಶ್ರೀ ನರಹರಿದಾಸರಿಂದ ರಾಮಾಯಣ ಪ್ರವಚನ ಪ್ರಾರಂಭವಾದಾಗ (ಆಂಜನೇಯನ ಗುಡಿಯಲ್ಲಿ) ತುಲಾರಾಮನು ಇದರಲ್ಲಿ ಅತಿ ಆಸಕ್ತಿಯನ್ನು ತೋರಿಸಿದ್ದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದನ್ನು ಗಮನಿಸಿದ ನರಹರಿದಾಸರು ತುಲಾರಾಮನ ಅದ್ಭುತ ಶಕ್ತಿಯನ್ನು ಗುರುತಿಸಿ, ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದರು. ನರಹರಿದಾಸರು ಹೋದ ಕಡೆಯಲ್ಲೆಲ್ಲಾ ಶಿಷ್ಯ ತುಲಾರಾಮನು ಹೋಗಿ ಪ್ರವಚನಕ್ಕೆ ಮೊದಲು (ತುಲಸೀದಾಸರು) ಸುಶ್ರಾವ್ಯವಾಗಿ ರಾಮ ಭಜನೆ ಮಾಡುತ್ತಿದ್ದನು.

ಗುರುಗಳು ತುಲಾರಾಮನಿಗೆ ವೇದ, ಶಾಸ್ತ್ರ, ಉಪನಿಷತ್ತುಗಳ ಬಗ್ಗೆ ಸೂಕ್ತ ತಿಳುವಳಿಕೆಗಳನ್ನು ನೀಡುತ್ತಿದ್ದರು. ತುಲಾರಾಮನಿಗೆ ಹದಿನಾಲ್ಕು ವರ್ಷಗಳು ಆದಾಗ ಸಕಲಶಾಸ್ತ್ರ ಪಂಡಿತನಾಗಿದ್ದನು. ಆಗ ತುಲಾರಾಮ ಕವಿತೆಗಳನ್ನು ರಚಿಸುತ್ತಿದ್ದ. ಶಿಷ್ಯನ ಪ್ರತಿಭೆಯ ಬಗ್ಗೆ ಗುರುವಿಗೆ ಅತ್ಯಾನಂದ ಆಯಿತು.

ನರಹರಿದಾಸರೇ ತುಲಾರಾಮನಿಗೆ ಮದುವೆಯನ್ನು ಮಾಡಿಸಿದರು. ರತ್ನಾವಳಿ ಎಂಬುವಳು ತುಲಾರಾಮನನ್ನು ಕೈಹಿಡಿದ ಸತಿ. ತುಲಾರಾಮನಿಗೆ ಹೆಂಡತಿಯಲ್ಲಿ ಬಹಳಷ್ಟು ಪ್ರೀತಿಯಿದ್ದುದರಿಂದ ಆಕೆಯನ್ನು ತವರುಮನೆಗೆ ಕಳುಹಿಸಿಯೇ ಇರಲಿಲ್ಲ.

ತುಲಾರಾಮ ಪಕ್ಕದ ಹಳ್ಳಿಗೆ ಪ್ರವಚನಕ್ಕೆ ಹೋಗಿದ್ದಾಗ ರತ್ನಾವಳಿಯ ಅಣ್ಣ ಒತ್ತಾಯಮಾಡಿ ತಂಗಿಯನ್ನು ತವರುಮನೆಗೆ ಕರೆದುಕೊಂಡು ಹೋದ. ಪಂಡಿತ ತುಲಾರಾಮ ರಾತ್ರಿ ಮನೆಗೆ ಬಂದಾಗ ಮನೆಗೆ ಬೀಗ ಹಾಕಿರುವುದನ್ನು ಕಂಡು ಗಾಬರಿಗೊಂಡ. ಪಕ್ಕದ ಮನೆಯವರು ಬೀಗದ ಕೈ ಕೊಟ್ಟು ವಿಷಯ ತಿಳಿಸಿದಾಗ ತುಲಾರಾಮನಿಗೆ ಬಹಳ ಕೋಪ ಬಂದಿತು. ಪತ್ನಿಯಿಲ್ಲದೆ ಆತನಿಗೆ ಮನೆಯಲ್ಲಿರಲು ಅಸಾಧ್ಯವಾಗಿ ಪತ್ನಿಯ ತವರಿಗೆ ತಾನೂ ಹೋಗುವುದು ಎಂದು ನಿರ್ಧಾರಮಾಡಿ ಹೊರಟನು.

ಧಾರಾಕಾರವಾಗಿ ಮಳೆ ಬೀಳುತ್ತಿದ್ದರೂ ಲೆಕ್ಕಿಸದೆ ಹೊರಟು ತನ್ನ ಹೆಂಡತಿಯ ಮನೆಯ ಬಾಗಿಲಿಗೆ ಬಂದು 'ರತ್ನಾವಳಿ, ರತ್ನಾವಳೀ' ಎಂದು ಕೂಗಿದ.

ಪತಿಯ ಪರಿಸ್ಥಿತಿಯನ್ನು ಕಂಡು ರತ್ನಾವಳಿಗೆ ಅಯ್ಯೋ ಎನಿಸಿದರೂ ಹಿಂದು ದಿನ ನನ್ನನ್ನು ಆಗಲಿ ಇರಲಾರದೆ ಹೋದರಲ್ಲಾ ಎಂಬುದಾಗಿ ಕುಪಿತ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊಂಡು ಪತಿಗೆ "ನನ್ನಲ್ಲಿ ತೋರಿಸಿದಷ್ಟು ಪ್ರೀತಿ ಶ್ರೀರಾಮನಲ್ಲಿ ತೋರಿಸಿದ್ದರೆ ಶ್ರೀರಾಮನು ನಿಮಗೆ ಪ್ರತ್ಯಕ್ಷನಾಗುತ್ತಿದ್ದ" ಎಂದಳು.

ಈ ಮಾತು ತುಲಾರಾಮನಿಗೆ ಬರಸಿಡಿಲು ಎರಗಿದಂತೆ ಆಗಿ, ತನ್ನ ಕಾರ್ಯಕ್ಕೆ ಪಶ್ಚಾತ್ತಾಪ ಪಟ್ಟು ಬೇಗನೇ ಅಲ್ಲಿಂದ ಹೊರಟುಹೋದ.

"ಶ್ರೀರಾಮನನ್ನು ಇಷ್ಟು ಕಾಲ ಮರೆತು ಪತ್ನಿಯ ಪ್ರೇಮದಲ್ಲಿ ಸಿಲುಕಿ ವೃಥಾ ಕಾಲಹರಣ ಮಾಡಿದೆನಲ್ಲಾ ಎಂಬುದಾಗಿ ಚಿಂತಿಸಿ, ಶ್ರೀರಾಮನೇ ನನ್ನ ಸರ್ವಸ್ವ" ಎಂಬುದಾಗಿ ಪಣ ತೊಟ್ಟು ಅಂದಿನಿಂದ ತುಲಸೀದಾಸರಾದರು.

ನಂತರ ತುಲಸೀದಾಸರು ಚಿತ್ರಕೂಟದ ಕಡೆಗೆ ಹೊರಟರು. ದಾರಿಯಲ್ಲಿ ಅನೇಕ ಪುಣ್ಯಕ್ಷೇತ್ರಗಳ ದರ್ಶನ ಮಾಡಿ, ಸಂತರ ಸಹವಾಸವನ್ನು ಮಾಡಿದರು. ರಾಮಭಕ್ತರ ಸಮೂಹವನ್ನು ಕಟ್ಟಿ ರಾಮನ ಬಗ್ಗೆ ಗೀತೆಗಳನ್ನು, ಗ್ರಂಥಗಳನ್ನು ರಚಿಸಿದರು. ಜನತೆಗೆ ಉಪದೇಶಾಮೃತವನ್ನು ಸಾರಿದರು.

ತುಲಸೀದಾಸರು ಸಂಸ್ಕೃತದ ಉದ್ದಾಮ ಪಂಡಿತರಾಗಿದ್ದರೂ ತಮ್ಮ ಕಾವ್ಯಗಳನ್ನು ಜನಸಾಮಾನ್ಯರು ಉಪಯೋಗಿಸುತ್ತಿದ್ದ ಭಾಷೆಗಳಲ್ಲೇ ರಚಿಸಿದರು.

ಭಕ್ತಿಯ ಬಗ್ಗೆ ಅವರು ತಿಳಿಸುತ್ತಾ "ಶ್ರೀರಾಮನೇ ಪುರುಷೋತ್ತಮ. ಆತನ ಆಚಾರವೇ ಆದರ್ಶ. ಶ್ರೀರಾಮನನ್ನು ಪ್ರಭುವೆಂದು ತಿಳಿದು ಆತನ ಕಿಂಕರರಾಗಿ ಸೇವಿಸುವುದೇ ಮಾನವನ ಧರ್ಮ" ಎಂದು ತಿಳಿಸಿದರು.

ತುಲಸೀದಾಸರು ತಮ್ಮ ಗ್ರಂಥಗಳಲ್ಲಿ ರತ್ನಾವಳಿಯ ಬಗ್ಗೆ ಯಾವ ಪ್ರಸ್ತಾಪವನ್ನೂ ಮಾಡಿಲ್ಲ.

ತುಲಸೀದಾಸರಿಗೆ ಚಿತ್ರಕೂಟದಲ್ಲಿ ಬಹಳ ಕಾಲವಿದ್ದರೂ ಶ್ರೀರಾಮನ ದರ್ಶನವಾಗದೆ ಮನಸ್ಸಿಗೆ ಅಹಿತವಾಗಿ ಶ್ರೀರಾಮನ ವಾಸಸ್ಥಾನವಾದ ಅಯ್ಯೋಧ್ಯೆಗೆ ಹೋಗಿ ಅಲ್ಲಿ ಬಹಳ ಕಾಲ ತಪಸ್ಸು ಮಾಡಿದರೂ ಶ್ರೀರಾಮನ ಸಾಕ್ಷಾತ್ಕಾರವಾಗದೆ ಶ್ರೀರಾಮನನ್ನು ನೋಡುವ ಹಂಬಲ ಹೆಚ್ಚಾಯಿತು.

CC-O. In Public Domain. Digitized by eGangotri

ಆಂಜನೇಯನ ಕೃಪೆಯಿಂದ ಶ್ರೀರಾಮನನ್ನು ನೋಡಬಹುದು ಎನ್ನುವ ವಿಷಯ ತುಲಸೀದಾಸರಿಗೆ ಹೊಳೆಯಿತು.

ಕಾಶಿಯ ಹಿಂದು ಕಡೆಯ ಆಂಜನೇಯ ಮುಂದಿರದಲ್ಲಿ ತುಲಸೀದಾಸರು ಬಂದು ನೆಲೆಸಿದರು. ಒಂದು ದಿನ ಯಥಾಪ್ರಕಾರವಾಗಿ ತುಲಸೀದಾಸರು, ತಂಬಿಗೆಯ ನೀರನ್ನು ಮರವೊಂದರ ಬುಡಕ್ಕೆ ಚೆಲ್ಲಿದಾಗ ಇವರ ಇವಿರಿಗೆ ಬ್ರಹ್ಮ ರಾಕ್ಷಸನೊಬ್ಬ ನಿಂತು ವಂದಿಸಿದನು. ತುಲಸೀದಾಸರ ಕೈಯ ನೀರು ಬಿದ್ದು ಬ್ರಹ್ಮರಾಕ್ಷಸನಿಗೆ ಶಾಪ ವಿಮೋಚನೆಯಾಗಿತ್ತು. ಬ್ರಹ್ಮರಾಕ್ಷಸನು ತುಲಸೀ ದಾಸರಿಗೆ "ನಿಮಗೆ ಏನು ಬೇಕು ಕೇಳಿ" ಎನ್ನಲು, ತುಲಸೀದಾಸರು "ನನಗೆ ಆಂಜನೇಯನ ದರ್ಶನ ಮಾಡಿಸು" ಎಂದರು.

ಬ್ರಹ್ಮರಾಕ್ಷಸನು ಹೇಳಿದ. "ಪ್ರತಿನಿತ್ಯವೂ ಈ ದೇವಾಲಯದಲ್ಲಿ ಪ್ರವಚನ ನಡೆಯುವಾಗ, ಒಬ್ಬ ಕುರೂಪಿ ಮುದುಕ ಬರುತ್ತಾನೆ. ಅವನೇ ಆಂಜನೇಯ" ಎಂದನು.

ತುಲಸೀದಾಸರು ತಮ್ಮ ಪ್ರವಚನ ಕೇಳಲು ಆಂಜನೇಯನು ಬರುತ್ತಿರುವ ವಿಷಯ ತಿಳಿದು ಅತ್ಯಾನಂದಪಟ್ಟನು. ತುಲಸೀದಾಸರು ಪ್ರವಚನ ಮಂಟಪದಲ್ಲಿ ಕುರೂಪಿ ಮುದುಕನನ್ನು ಕಂಡರು. ಪ್ರವಚನ ಮುಗಿದನಂತರ ಮುದುಕ ಊರಿನ ದಾರಿ ಬಿಟ್ಟು ಕಾಡಿನ ದಾರಿ ಹಿಡಿದ. ತುಲಸೀದಾಸರೂ ಸಹ ಈ ಮುದುಕನನ್ನು ಹಿಂಬಾಲಿಸಿದರು. ನಂತರ ತುಲಸೀದಾಸರು ಮುದುಕನ ಕಾಲು ಹಿಡಿದುಕೊಂಡು, "ಸ್ವಾಮಿ, ನೀನೇ ಶ್ರೀರಾಮನ ಭಂಟ, ನಿನ್ನ ನಿಜರೂಪ ತೋರಿಸು. ನನ್ನ ಇಚ್ಛೆಯನ್ನು ಪೂರ್ಣಗೊಳಿಸುವತನಕ ನಿನ್ನ ಕಾಲು ಬಿಡುವುಲ್ಲ" ಎಂದು ಪರಿ ಪರಿಯಾಗಿ ಪ್ರಾರ್ಥಿಸಲು ಆಂಜನೇಯ ತನ್ನ ನಿಜರೂಪ ತೋರಿಸಿ ಹೇಳಿದ, "ಆ ಪೊದರಿನ ಮರೆಯಲ್ಲಿ ಬಚ್ಚಿಟ್ಟು ಕೊಂಡಿರು. ಸ್ವಲ್ಪ ಸಮಯದಲ್ಲಿ ಶ್ರೀರಾಮ ಲಕ್ಷ್ಮಣರು ಈ ಕಡೆ ಬರುತ್ತಾರೆ. ಆಗ ಅವರ ದರ್ಶನ ಮಾಡು."

ತುಲಸೀದಾಸರಿಗೆ ಶ್ರೀರಾಮ ಲಕ್ಷ್ಮಣರ ದರ್ಶನ ಹೇಗಾಯಿತು ಎನ್ನುವು ದರ ಬಗ್ಗೆ ಅನೇಕ ಕಥೆಗಳು ರೂಢಿಯಲ್ಲಿವೆ. ಅದರಲ್ಲಿ ಒಂದು ಕಥೆ ಈ ಕೆಳ ಕಂಡಂತೆ ಇದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ತುಲಸೀದಾಸರು ರಾಮಧ್ಯಾನ ಮಾಡುತ್ತಾ ಕುಳಿತಿದ್ದರು. ಇಬ್ಬರು ರಾಜಕುಮಾರರು ಕುದುರೆಗಳ ಮೇಲೆ ಕುಳಿತು ಅತ್ತ ದಾಟಿದರು. ಎಷ್ಟು ಹೊತ್ತಾದರೂ ರಾಮಲಕ್ಷ್ಮಣರು ಬರಲೇಯಿಲ್ಲ. ಬಹಳ ಹೊತ್ತಾದ ಮೇಲೆ ಆಂಜನೇಯ ಕಾಣಿಸಿದ. ತುಲಸೀದಾಸರು ಆಂಜನೇಯನ ಕಾಲುಗಳನ್ನು ಹಿಡಿದುಕೊಂಡು, "ಆಂಜನೇಯ ಇಷ್ಟು ಸಮಯವಾದರೂ ಶ್ರೀ ರಾಮ ಲಕ್ಷ್ಮಣರು ಬರಲಿಲ್ಲ. ಇನ್ನಾದರೂ ರಾಮಲಕ್ಷ್ಮಣರನ್ನು ತೋರಿಸು" ಎಂದು ಪ್ರಾರ್ಥಿಸಿದರು.

ಆಗ ಆಂಜನೇಯ, "ಕುದುರೆಗಳ ಮೇಲೆ ಹೋದ ರಾಜಕುಮಾರರೇ ರಾಮಲಕ್ಷ್ಮಣರು ಎನ್ನಲು, ತುಲಸೀದಾಸರು ತಮ್ಮ ಮೂಢತನಕ್ಕೆ ದುಃಖ ಪಟ್ಟರು. ನಂತರ ಆಂಜನೇಯನನ್ನು ಮತ್ತೆ ಪ್ರಾರ್ಥಿಸಲಾಗಿ ಆಂಜನೇಯನು ಅಯೋಧ್ಯೆಯಲ್ಲಿ ಶ್ರೀಸೀತಾ ರಾಮಲಕ್ಷ್ಮಣರ ದರ್ಶನ ದೊರೆಯುತ್ತದೆ" ಎಂದು ಗಗನದಲ್ಲಿ ನಿಂತು ಹೇಳಿದಂತೆ ಕೇಳಿಸಿತು.

ರಾಮಲಕ್ಷ್ಮಣರ ದರ್ಶನ ತುಲಸೀದಾಸರಿಗೆ ಆದ ರೀತಿಯ ಬಗ್ಗೆ ಇನ್ನೂ ವಿವಿಧ ಕಥೆಗಳು ಉಂಟು.

ನಂತರ ತುಲಸೀದಾಸರಿಗೆ ಶ್ರೀರಾಮನ ದರ್ಶನ ಆಯಿತು. ಶ್ರೀರಾಮನು ದಾಸರಿಗೆ ತನ್ನ ಹಣೆಗೆ ಚಂದನವನ್ನಿಡುವಂತೆ ಹೇಳಿದ ಎಂದು ಕೆಲವರು ಹೇಳುತ್ತಾರೆ.

ಶ್ರೀರಾಮ, ಸೀತೆ ಮತ್ತು ಲಕ್ಷ್ಮಣರು ಯಮುನೆಯನ್ನು ದಾಟಿ ಚಿತ್ರಕೂಟಕ್ಕೆ ಬಂದಾಗ ಹಬ್ಬ ತಾಪಸಿ ಅವರ ಪಾದಕ್ಕೆರಗುತ್ತಾಳೆ. ಈ ಪ್ರಸಂಗ ರಾಮಚರಿತ ಮಾನಸದಲ್ಲಿ ಬರುತ್ತದೆ. ತುಲಸೀದಾಸರು ತಮಗೆ ಶ್ರೀರಾಮ ದರ್ಶನವಾದುದನ್ನು ಆಲ್ಲಿ ಜ್ಞಾಪಿಸಿಕೊಂಡಿದ್ದಾರೆ ಎಂಬುದಾಗಿ ಕೆಲವರು ಹೇಳುವರು.

ರಾಮಚರಿತಮಾನಸ: ತುಲಸೀದಾಸರು ಕಾಶಿಯನ್ನು ಬಿಟ್ಟು ಮತ್ತೆ ಅಯೋಧ್ಯೆಗೆ ಬಂದರು. 'ಜಾನಕೀಮಂಗಲ,' 'ಪಾರ್ವತೀ ಮಂಗಲ'ಗಳೆಂಬ ಎರಡು ಕಾವ್ಯಗಳನ್ನು ಕಾಶಿಯಲ್ಲಿದ್ದಾಗ ರಚಿಸಿರಬಹುದು. ಅಯೋಧ್ಯೆಗೆ

Sri Vidyabharathi Book Centre, Sringeri

 CC-O. In Public Domain. Digitized by eGangotri

ಬಂದನಂತರ ಸ್ವಲ್ಪ ಕಾಲ ಕಠಿಣ ತಪಸ್ಸು ಮಾಡಿದ ತುಲಸೀದಾಸರು ರಾಮ ಚರಿತಮಾನಸದ ಗ್ರಂಥರಚನೆಯ ಸಂಕಲ್ಪ ಮಾಡಿದರು. ತಮ್ಮ ಗ್ರಂಥದ ಮೂಲಕ ವಿಶ್ವದ ಜನತೆಗೂ ಶ್ರೀ ಸೀತಾರಾಮ ಲಕ್ಷ್ಮಣರ ದರ್ಶನಮಾಡಿಸಿ, ತಾವೂ ಕಂಡರು.

ರಾಮಚರಿತ ಮಾನಸದಲ್ಲಿ, ತುಲಸೀದಾಸರು ಶ್ರೀರಾಮನು ಮಾನವರಿಗೆ ಎಂಥಹ ಆದರ್ಶ ತತ್ವವನ್ನು ಸಾರಿದ ಎಂಬುದನ್ನು ಹೃದಯ ಮುಟ್ಟುವಂತೆ ಚಿತ್ರಿಸಿದ್ದಾರೆ. ಸೀತಾಮಾತೆಯು ನಾರೀ ಕುಲಕ್ಕೆ ಆದರ್ಶರತ್ನವಾಗಿ ಇದ್ದಳು ಎಂಬುದನ್ನು ಉತ್ತಮ ರೀತಿಯಲ್ಲಿ ಚಿತ್ರಿಸಿದ್ದಾರೆ.

ಬೇರೆ ರಾಮಾಯಣಗಳಲ್ಲಿರದ ಕೆಲವು ಹೃದಯಸ್ಪರ್ಶಿ ಪ್ರಸಂಗಗಳು ರಾಮಚರಿತ ಮಾನಸದಲ್ಲಿ ವ್ಯಕ್ತವಾಗಿವೆ. 'ಕೇವಟ ಪ್ರಸಂಗ' ತುಲಸೀ ರಾಮಾಯಣದಲ್ಲಿ ಬಹಳ ಪ್ರಸಿದ್ಧವಾಗಿದೆ. ಕೇವಟನೆಂದರೆ ಗುಹ. ಗುಹ ಶ್ರೀರಾಮನ ಪರಮಭಕ್ತನಾಗಿದ್ದನು. ಕಾನನಕ್ಕೆ ಬಂದ ಶ್ರೀ ಸೀತಾರಾಮ, ಲಕ್ಷ್ಮಣರ ಸೇವೆಯನ್ನು ಮಾಡುತ್ತಾನೆ.

ಮರುದಿನ ಗಂಗಾನದಿ ದಾಟಲು ಶ್ರೀರಾಮನು ದೋಣಿಗೆ ಕಾಲಿಡುವ ಮೊದಲು ಗುಹ ಹೇಳುತ್ತಾನೆ "ಪರಮಾತ್ಮ, ನಿಮ್ಮ ಪಾದಕಮಲಗಳನ್ನು ತೊಳೆಯದೆ ದೋಣಿಯನ್ನು ಏರಲು ಬಿಡಲಾರೆ. ನಿಮ್ಮ ಪಾದದ ಧೂಳು ಸೋಕಿ ಶಿಲೆಯು ಮುನಿಪತ್ನಿ (ಅಹಲ್ಯೆ) ಯಾದಳು. ಆದೇ ರೀತಿ ನನ್ನ ದೋಣಿ ಹೆಣ್ಣಾದರೆ ನನ್ನ ಗತಿ ಏನು? ಈ ಪ್ರಸಂಗವನ್ನು ತುಲಸೀದಾಸರು ಅತ್ಯುತ್ತಮವಾಗಿ ವರ್ಣಿಸಿದ್ದಾರೆ.

ದಶರಥನ ಪುತ್ರಪ್ರೇಮ, ಭರತನ ಭ್ರಾತೃಪ್ರೇಮ ಮುಂತಾದ ಪ್ರಸಂಗಗಳು ಉತ್ತಮವಾಗಿ ಚಿತ್ರಿತವಾಗಿವೆ.

'ಒಳ್ಳೆಯ ಕಾವ್ಯ ಗಂಗಾನದಿಯಂತೆ ಎಲ್ಲರಿಗೂ ಸೇರಬೇಕು' ಎನ್ನುವ ಭಾವನೆ ತುಲಸೀದಾಸರಲ್ಲಿತ್ತು.

ಧೈರ್ಯ ಕಳೆದುಕೊಂಡಿದ್ದ ಮತ್ತು ದುಷ್ಟರ ದುರಾಕ್ರಮಣಕ್ಕೆ ಸಿಲುಕಿದ್ದ ಜನರಿಗೆ ತುಲಸೀದಾಸರ ರಾಮಚರಿತಮಾನಸವು ಭಕ್ತಿಯ ಪ್ರಕಾಶದಲ್ಲಿ ಶ್ರೀರಾಮನ ದರ್ಶನ ಮಾಡಿಸಿದರು.

CC-O. In Public Domain. Digitized by eGangotri

ತುಲಸೀದಾಸರಿಗೆ ಗ್ರಂಥದ ಪ್ರಕಾಶನಕ್ಕೆ ಕಾಶಿಯೇ ಯೋಗ್ಯವೆಂದು ತಿಳಿದರು. ಮತ್ತೆ ಕಾಶಿಗೆ ಬಂದರು. ತಾವೇ ರಚಿಸಿದ ರಾಮಚರಿತ ಮಾನಸದ ಗಾಯನ, ವ್ಯಾಖ್ಯಾನ ಪ್ರಾರಂಭವಾಯಿತು.

ಕಾಶಿಯ ಜನ ತುಲಸೀದಾಸರನ್ನು ವಾಲ್ಮೀಕಿಯ ಅವತಾರವೆಂದು ಭಾವಿಸಿದರು. ಅನೇಕರು ಅವರ ಶಿಷ್ಯೋತ್ತಮರಾದರು.

ಮಾತ್ಸರ್ಯದ ಜನರು ರಾಮಚರಿತಮಾನಸಕ್ಕೆ ಕಳಂಕ ತರಲು ಯೋಚಿಸಿದರು. ಒಂದು ದಿನ ಕಾಶಿಯ ವಿಶ್ವನಾಥ ದೇಗುಲದಲ್ಲಿ ವಿದ್ವಾಂಸರ ಸಮ್ಮುಖದಲ್ಲಿ, ಎಲ್ಲಾ ಶಾಸ್ತ್ರ ಗ್ರಂಥಗಳ ಪಠನ ನಡೆಯಿತು. ರಾಮಚರಿತಮಾನಸದ ಪಠನವೂ ನಡೆಯಿತು. ನಂತರ ಎಲ್ಲಾ ಗ್ರಂಥಗಳನ್ನು ದೇವರ ಸಮ್ಮುಖದಲ್ಲಿ ಇಡಲಾಯಿತು. ಆ ಸಂದರ್ಭದಲ್ಲಿ ಕೆಲವು ಕುಟಿಲ ವ್ಯಕ್ತಿಗಳು ರಾಮಚರಿತ ಮಾನಸವನ್ನು ಇತರ ಗ್ರಂಥಗಳ ಕೆಳಗೆ ಇಟ್ಟು ಅವಮಾನ ಮಾಡಿದರು. ಆದರೆ ಮಾರನೆಯದಿನ ಮುಂಜಾನೆ ದೇವಾಲಯದ ದ್ವಾರ ತೆರೆದಾಗ ರಾಮಚರಿತ ಮಾನಸವು ಇತರ ಎಲ್ಲ ಗ್ರಂಥಗಳ ಮೇಲೆ ಶೋಭಿಸುತ್ತಿತ್ತು. ಆಗ ಎಲ್ಲರಿಗೂ ರಾಮಚರಿತಮಾನಸದ ಹಿರಿಮೆ ಅರಿವಾಯಿತು.

ಇದೇ ರೀತಿಯ ಇನ್ನೊಂದು ಪ್ರಸಂಗ ನಡೆಯಿತು.

ತುಲಸೀದಾಸರ ಪ್ರಬಲ ವಿರೋಧಿಗಳೆಲ್ಲ ಸೇರಿ ಮಹಾ ವಿದ್ವಾಂಸರಾದ ಮಧುಸೂದನ ಸರಸ್ವತಿಯವರ ಸನ್ನಿಧಿಗೆ ರಾಮಚರಿತ ಮಾನಸವನ್ನು ಕೊಂಡೊಯ್ದು : "ಈ ಗ್ರಂಥದ ಬಗ್ಗೆ ತಮ್ಮ ಅಭಿಪ್ರಾಯವೇನು?" ಎಂದು ಕೇಳಿದರು.

ಮಧುಸೂದನ ಸರಸ್ವತಿಯವರು ರಾಮಚರಿತಮಾನಸದ ಬಗ್ಗೆ ಈ ರೀತಿ ಹೇಳಿದರು "ಈ ಮಹಾಕಾವ್ಯ ವೃಂದಾವನದಲ್ಲಿ ತುಲಸೀ ಎಂಬ ಮರವಿದೆ. ಇದರ ಕವಿತಾ ರೂಪದ ಪುಷ್ಪಗಳಲ್ಲಿ ರಾಮನೆಂಬ ದುಂಬಿ ಝೇಂಕರಿಸುತ್ತಾ ಸಂಚರಿಸುತ್ತಿದೆ."

ತುಲಸೀದಾಸರ ಕೀರ್ತಿ ಕಾಶಿಯಲ್ಲೇ ಸೀಮಿತವಾಗದೆ, ಇಡಿ ಉತ್ತರ ಭಾರತಕ್ಕೆಲ್ಲಾ ಪಸರಿಸಿತು. ಮುಸ್ಲಿಮರು ಸಹ ತುಲಸೀದಾಸರ ಶಿಷ್ಯರಾಗಿ,

CC-O. In Public Domain. Digitized by eGangotri

ರಾಮಭಕ್ತರಾದರು. ಬಾದಶಹ ಜಹಾಂಗೀರನಿಗೆ ಸಂಬಂಧಪಟ್ಟಂತೆ ಒಂದು ಕಥೆ ಇದೆ. ಬಾದಶಹ ಜಹಾಂಗೀರನಿಗೂ ಈ ವಿಷಯ ತಿಳಿದು ಜಹಾಂಗೀರ್ ತುಲಸೀದಾಸರನ್ನು ನೋಡಲು ಇಚ್ಛಿಸಿದ.

ಆಗ್ರಾಕ್ಕೆ ಬಂದು ತುಲಸೀದಾಸರನ್ನು ಮೊಗಲ್‌ಚಕ್ರವರ್ತಿ ಕರೆಸಿ ಸತ್ಕರಿಸಿದ.

ಜಹಾಂಗೀರ್ ತುಲಸೀದಾಸರಿಗೆ, "ನಿಮ್ಮ ಪವಾಡವನ್ನು ತೋರಿಸಿ" ಎನ್ನಲು ತುಲಸೀದಾಸರು "ನಾನು ಪವಾಡ ಮಾಡುವುದಿಲ್ಲ. ರಾಮನೇ ಸರ್ವಶಕ್ತನು" ಎಂದಾಗ ಜಹಾಂಗೀರ್ ಹಠಹಿಡಿದು "ನೀವು ಪವಾಡ ಪ್ರದರ್ಶನ ಮಾಡುವವರೆಗೂ ಬಿಡುವುದಿಲ್ಲ" ಎಂದು ಕೋಟೆಯಲ್ಲಿ ಸೆರೆಗೆ ಹಾಕಿದ. ಎಲ್ಲವೂ ಮಾರುತಿಯ ಇಚ್ಛೆ ಎಂದು ಕೈ ಮುಗಿದು ತುಲಸೀದಾಸರು ಕುಳಿತರು.

ಇದ್ದಕ್ಕಿದಂತೆ ಕೋತಿಗಳು ರಾಜನ ಅರಮನೆ.....ಇತ್ಯಾದಿ ಮುಖ್ಯ ಸ್ಥಳಗಳಿಗೆ ನುಗ್ಗಿ ಹಾವಳಿ ಮಾಡಿದವು. ತುಲಸೀದಾಸರನ್ನು ಬಿಡುಗಡೆ ಮಾಡಿದ ನಂತರವೇ, ಜಹಾಂಗೀರ್ ಕೋತಿಗಳ ಹಾವಳಿಯಿಂದ ಮುಕ್ತನಾದದ್ದು.

ಅಂದಿನಿಂದ ತುಲಸೀದಾಸರು ಮತ್ತು ಅವರ ಶಿಷ್ಯರಿಗೆ ಜಹಾಂಗೀರ್‌ನ ಕಾಟ ತಪ್ಪಿತು.

ಈ ಮಧ್ಯೆ ತುಲಸೀದಾಸರು (ಸತಸಇ) ಎಂಬ ಪದ್ಯಗಳ ಗ್ರಂಥ ರಚಿಸಿದರೆಂದು ಗೊತ್ತಾಗಿದೆ. 'ಗೀತಾವಲೀ' ಎಂಬ ಇನ್ನೊಂದು ಪದ್ಯ ಸಂಗ್ರಹದಲ್ಲಿ, ಸೇಮನೆಯಲ್ಲಿ ತುಲಸೀದಾಸರು ಆಂಜನೇಯನನ್ನು ಪ್ರಾರ್ಥಿಸಿದ ಪದ್ಯ ಇರುವುದರಿಂದ, ಆ 'ಗೀತಾವಲೀ' ಎಂಬ ಗ್ರಂಥರಚನೆ ಪ್ರಾಯಶಃ ಇದೇ ಸಂದರ್ಭದಲ್ಲಿ ಆಗಿರಬಹುದು.

ತುಲಸೀದಾಸರ ಶಿಷ್ಯ ಸಮೂಹ ಬೃಹದಾಕಾರವಾಗಿ ಬೆಳೆದು, ಈ ಶಿಷ್ಯರು ರಾಮಭಕ್ತಿಯ ಪ್ರಚಾರ ಕಾರ್ಯದಲ್ಲಿ ನಿರತರಾದರು.

Sri Vidyabharathi Book & Centre, Shagali

 CC-O. In Public Domain. Digitized by eGangotri

ಒಮ್ಮೆ ತುಲಸೀದಾಸರು, ಮಥುರಾಕ್ಕೆ ಹೋಗಿದ್ದಾಗ ಅಲ್ಲಿನ ಸಾಧು ಸಂತರು ತುಲಸೀದಾಸರನ್ನು ಆದರದಿಂದ ಬರಮಾಡಿಕೊಂಡು, "ಸ್ವಾಮಿ, ತಾವು ಶ್ರೀರಾಮನ ಭಕ್ತರು. ಶ್ರೀರಾಮನನ್ನು ಬಿಟ್ಟು ಅನ್ಯ ದೇವರನ್ನು ಕುರಿತು ತಾವು ಹಾಡುವುದಿಲ್ಲವೆ? ಎಂದು ಕೇಳಲು, ತುಲಸೀದಾಸರು "ಶ್ರೀರಾಮನೇ ಶ್ರೀಕೃಷ್ಣ" ಎಂಬುದಾಗಿ ಹೇಳಿ ಕೃಷ್ಣನಿಗೆ ಸಂಬಂಧ ಪಟ್ಟಂತೆ ಒಂದು ಗೀತೆಯನ್ನು ರಚಿಸಿ ಹಾಡಿದರು. ಗೀತೆಯು ಮುಗಿಯುತ್ತಿದ್ದಂತೆ ಗರ್ಭ ಗುಡಿಯಲ್ಲಿ ಶ್ರೀಕೃಷ್ಣನ ಮೂರ್ತಿ ಶ್ರೀರಾಮನಾಗಿ ಕಾಣಿಸಿಕೊಂಡಿತಂತೆ.

ಈ ಅದ್ಭುತವನ್ನು ನೋಡಿ ಜನ ಬೆರಗಾದರು.

ನಂತರ ತುಲಸೀದಾಸರು 'ಕೃಷ್ಣಗೀತಾವಲೀ' ಎಂಬ ಗ್ರಂಥವನ್ನು ರಚಿಸಿದರು.

ಪವಿತ್ರ ಪ್ರಸಿದ್ಧ ತೀರ್ಥಕ್ಷೇತ್ರಗಳನ್ನೆಲ್ಲಾ ಸಂಚರಿಸಿದ ಮೇಲೆ ತುಲಸೀದಾಸರು ತಮ್ಮ ಕೊನೆಯ ದಿನಗಳನ್ನು ಕಾಶಿಯಲ್ಲೇ ಕಳೆದರು, ಅಂತಿಮ ದಿನಗಳಲ್ಲಿ ರಟ್ಟಿ ನೋವು ಕಾಣಿಸಿಕೊಂಡಿತಂತೆ. ತುಲಸೀದಾಸರು ಸುಮಾರು ವಿಕ್ರಮ ಶಕ ೧೬೮೦ (ಕ್ರಿಸ್ತಶಕ ೧೬೨೩) ರಲ್ಲಿ ಕಾಶಿಯ ಅಸೀಘಾಟ್‌ನಲ್ಲಿ ಇಹಲೋಕ ತ್ಯಜಿಸಿದರು. ತುಲಸೀದಾಸರು ೧. ದೋಹಾವಲಿ ೨. ಕವಿತ್ತ ರಾಮಾಯಣ, ೩. ಗೀತಾವಲಿ ೪. ರಾಮಚರಿತಮಾನಸ ೫. ರಾಮಜ್ಞಾ, ೬. ವಿನಯಪತ್ರಿಕಾ, ಈ ಆರು ದೊಡ್ಡ ಗ್ರಂಥಗಳು. ೧. ರಾಮಲಲಾನ ಹಛೂ ೨. ಪಾರ್ವತೀ ಮಂಗಲ, ೩. ಜಾನಕಿಮಂಗಲ ೪. ಬರವೈರಾಮಾಯಣ, ೫. ವೈರಾಗ್ಯಸಂದೀಪಿನಿ, ೬. ಕೃಷ್ಣ ಗೀತಾವಲಿ–ಈ ಆರು ಸಣ್ಣ ಗ್ರಂಥಗಳು. ಇವು ಹನ್ನೆರಡಲ್ಲದೆ ಇನ್ನೂ ಕೆಲವು ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲೆಲ್ಲಾ ರಾಮಚರಿತಮಾನಸ ಗ್ರಂಥ ಮುಖ್ಯವಾಗಿ, ಸರ್ವ ಶ್ರೇಷ್ಠವಾಗಿ, ಮೆರೆದಿದೆ.

ತುಲಸೀದಾಸರು ಉತ್ತಮ ವ್ಯಕ್ತಿತ್ವವನ್ನು ಪಡೆದಿದ್ದರು. ಬಾಲ್ಯದಲ್ಲೇ ಬಹು ಕಷ್ಟನಷ್ಟವನ್ನು ಕಂಡವರು. ತಂದೆ, ತಾಯಿಯ ಪೋಷಣೆಯಿಲ್ಲದೆ ಅವರಿವರ ಕೃಪೆಯಿಂದ ಬೆಳೆದಿದ್ದವರು, ಸನ್ಯಾಸಿಯಾದ ಮೇಲೂ ಅನೇಕ ನೋವನ್ನು ಉಂಡವರು. ಅವರು ಕಾಶಿಯಲ್ಲಿ ಇದ್ದಾಗ, ಅವರನ್ನು ತಿಗಳಿದವರು, ಅಪಹಾಸ್ಯ ಮಾಡಿದವರು ಬಹಳ ಮಂದಿ. ತುಲಸೀದಾಸರು ಇವರ ಬಗ್ಗೆ ಕೋಪಗೊಳ್ಳುತ್ತಿರಲಿಲ್ಲ. ಅವರೇ ಒಂದು ಕಡೆ ಹೇಳುತ್ತಾ "ತುಲಸೀದಾಸ

 CC-O. In Public Domain. Digitized by eGangotri

ಕೆಟ್ಟ ಕೆಲಸಗಳನ್ನು ಮಾಡುತ್ತಾನೆ ಎಂದು ಕೆಲವರು ಹೇಳುತ್ತಾರೆ. ಕೆಲವರು, ಅವನೊಬ್ಬ ಮಹಾಮೋಸಗಾರ ಎನ್ನುತ್ತಾರೆ. ಇನ್ನು ಕೆಲವರು ಅವನು ರಾಮ ಭಕ್ತ ಎನ್ನುತ್ತಾರೆ. ಎಲ್ಲವನ್ನೂ ನಾನು ಸಹಿಸಿಕೊಳ್ಳಬಲ್ಲೆ. ತುಲಸಿಗೆ ಒಳ್ಳೆಯದಾಗುವುದು, ಕೆಟ್ಟದ್ದಾಗುವುದು ಎಲ್ಲ ಶ್ರೀರಾಮನ ಕೈಯಲ್ಲಿದೆ."

ತುಲಸೀದಾಸರಿಗೆ ರಾಮಧ್ಯಾನವೇ ಎಲ್ಲಕ್ಕಿಂತ ಮಹತ್ವದ್ದಾಗಿತ್ತು. ಜಾತಿಮತ ಕುಲಗಳನ್ನು ತುಲಸೀದಾಸರು ಮರೆತು ಎಲ್ಲರೂ ರಾಮನ ಕೃಪೆಗೆ ಪಾತ್ರರಾಗಿ ಎಂಬುದಾಗಿ ನುಡಿದಿದ್ದರು.

ತುಲಸೀದಾಸರು ಚಿತ್ರಿಸಿದ ರಾಮ, ಲಕ್ಷ್ಮಣ, ಭರತ, ಸೀತೆ.... ಮುಂತಾದವರು ಆದರ್ಶ ವ್ಯಕ್ತಿಗಳಾಗಿ ಮೆರೆದು ನಮ್ಮನ್ನು ಆದರ್ಶ ವ್ಯಕ್ತಿಗಳಾಗುವಂತೆ ಮಾರ್ಗದರ್ಶನ ನೀಡಿದ್ದಾರೆ. ಇಂತಹ ಪ್ರಸಂಚ ಪ್ರಖ್ಯಾತರಾದ ತುಲಸೀದಾಸರು ನಮ್ಮ ದೇಶಕ್ಕೆ ಸೇರಿದವರು ಎನ್ನುವ ಹೆಮ್ಮೆ ನಮಗೆಲ್ಲರಿಗೂ ಇದೆ. ತುಲಸೀದಾಸರು ಮಹಾಕವಿಗಳಾಗಿ, ಮಹಾಸಂತರಾಗಿ ಮೆರೆದಿದ್ದರು.

ತುಲಸೀರಾಮಾಯಣವೆಂಬುದಾಗಿ ಉತ್ತರ ಭಾರತದಲ್ಲಿ ಬಹುಪ್ರಸಿದ್ಧವಾದ ಮಹಾಕಾವ್ಯ ರಾಮಚರಿತ ಮಾನಸ.

ಗೋಸ್ವಾಮಿ ತುಲಸೀದಾಸರು ಶ್ರೀರಾಮನ ಮಹಿಮೆಯನ್ನು ಇನ್ನಿಲ್ಲದಂತೆ ವರ್ಣಿಸಿದ್ದಾರೆ (ಗೋಸ್ವಾಮಿ ಎಂದರೆ ಸಂಸಾರ ಬಿಟ್ಟು ಸನ್ಯಾಸಿಯಾದವರು).

ಆದಿ ಕವಿ ವಾಲ್ಮೀಕಿಯು ರಾಮನ ಕಥೆಯನ್ನು "ರಾಮಾಯಣ"ದಲ್ಲಿ ಹೇಳಿದ ಮೇಲೆ, ಬಹಳಷ್ಟು ಕವಿಗಳು ತಮ್ಮದೇ ಆದ ಹಾದಿಯಲ್ಲಿ ಮತ್ತೆ-ಮತ್ತೆ ಹೇಳಿದ್ದಾರೆ. ಜನರ ಪೂರ್ಣ ಪ್ರೀತಿ-ಗೌರವಗಳನ್ನು ಬಹಳವಾಗಿ ಸಂಪಾದಿಸಿರುವ ರಾಮಾಯಣಗಳಲ್ಲಿ 'ತುಲಸೀರಾಮಾಯಣ'ವೂ ಒಂದು ತುಲಸೀದಾಸರು ವೇದ, ಶಾಸ್ತ್ರ, ಪುರಾಣಗಳನ್ನು ಅಭ್ಯಸಿಸಿ ಆಳವಾದ ಪಾಂಡಿತ್ಯವನ್ನು ಗಳಿಸಿದ್ದವರು. ತುಲಸೀದಾಸರು ಜನರಿಗೆ ರಾಮನ ಮಹಿಮೆಯನ್ನು ತಿಳಿಸಿದರು. ತಂದೆ-ಮಕ್ಕಳ ಸಂಬಂಧ, ಅಣ್ಣ-ತಮ್ಮಂದಿರ ಪ್ರೀತಿ.... ಮುಂತಾದವುಗಳನ್ನು ರಾಮಚರಿತ ಮಾನಸ ಬಹಳ ಸುಂದರವಾಗಿ ವರ್ಣಿಸು

 CC-O. In Public Domain. Digitized by eGangotri

ತ್ತದೆ. ಗಂಡ–ಹೆಂಡತಿ ಹೇಗೆ ವ್ಯವಹರಿಸಬೇಕು, ಅತ್ತೆ ಸೊಸೆ ಹೇಗೆ ನಡೆದು ಕೊಳ್ಳಬೇಕು ಇವುಗಳ ವರ್ಣನೆ, ರಾಮಚರಿತ ಮಾನಸದಲ್ಲಿದೆ. ಗುರು–ಶಿಷ್ಯರ ಸಂಬಂಧದ ಬಗ್ಗೆಯೂ ಇಲ್ಲಿ ವರ್ಣಿತವಾಗಿದೆ.

ಹಿಂದೂಗಳಿಗೆ ಕಷ್ಟದ ಕಾಲ ಬಂದು ಹೊದಗಿತ್ತು. ಅವರ ಗ್ರಂಥಗಳು ಸಂಸ್ಕೃತದಲ್ಲಿದ್ದು ಅನೇಕರಿಗೆ ಇವುಗಳನ್ನು ಅರಿಯುವುದು ಬಹಳ ಕಷ್ಟವಾಗಿತ್ತು. ಸ್ವಾತಂತ್ರ್ಯ ಇಲ್ಲದ ಹಿಂದೂಗಳಿಗೆ ತಮ್ಮ ಧರ್ಮದ ಬಗ್ಗೆ, ಎಲ್ಲರಿಗೂ ತಿಳಿಸುವಂತೆ ಪ್ರಯತ್ನಿಸುವುದೂ ಕಷ್ಟ ಸಾಧ್ಯವಾಗಿತ್ತು. ಹಿಂದೂಗಳಲ್ಲಿ ಕೆಲವು ಜಾತಿಯವರಿಗೆ ಮತ್ತು ಸ್ತ್ರೀಯರಿಗೆ ಸಮಾನತೆ ಸಿಕ್ಕಿರಲಿಲ್ಲ. ಅಂತಹ ಸಮಯದಲ್ಲಿ ತುಲಸೀದಾಸರ ಆಗಮನವಾಗಿ ಹಿಂದೂಳಿಗೆ ಮಹದುಪಕಾರವಾಯಿತು. ಕಷ್ಟದಲ್ಲಿ ಸಿಲುಕಿರುವ ಹಿಂದೂಗಳು, ರಾಮನನ್ನು ಮರೆಹೋಗಿ ಎಂಬುದಾಗಿ ತುಲಸೀದಾಸರು ತಿಳಿಸಿದರು. ತುಲಸೀದಾಸರು ಭಕ್ತ ಶಿರೋಮಣಿ ಎಂದು ಗೌರವಿಸಲ್ಪಟ್ಟರು.

ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀ ರಾಮಾನುಜಾಚಾರ್ಯರನ್ನು ಅನುಸರಿಸಿ, ಪ್ರಚಾರವಾದ ರಾಮಾನಂದರ ಮತಾನುಯಾಯಿಗಳಾದರು. ತುಲಸೀದಾಸರು ಅದ್ವೈತ ಸಿದ್ಧಾಂತವನ್ನು ಪ್ರೀತಿಸುತ್ತಿದ್ದರೂ ಮಧುಸೂದನ ಸರಸ್ವತಿಯವರಲ್ಲಿ ಬಹಳ ವಿಶ್ವಾಸವನ್ನಿಟ್ಟಿದ್ದರು. ತಮ್ಮ ಗ್ರಂಥದಲ್ಲಿ ಶಿವನಿಗೂ ಸಾಕಷ್ಟು ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ತುಲಸೀದಾಸರು ಜನರಲ್ಲಿ ನೆಲೆಸಿದ್ದ ನಾಸ್ತಿಕತೆ, ಅಂಧವಿಶ್ವಾಸವನ್ನು ತೊಲಗಿಸಲು ಬಹಳ ಪ್ರಯತ್ನಪಟ್ಟಿದ್ದರು, ಅಂದು ವ್ಯಾರಂಭವಾದ ಅವರ ಆ ಮಹತ್ಕಾರ್ಯವು ಇಂದಿಗೂ ಇನ್ನೂ ನಡೆದುಬರುತ್ತಿದೆ. ಆಕಾಶದಲ್ಲಿ ಸೂರ್ಯ ಚಂದ್ರರು ಇರುವವರೆಗೆ ಇದು ನಡೆದು ಬರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಮಹಾತ್ಮರು ಲೋಕಕ್ಕೆ ಒಂದು ಉದ್ದೇಶವನ್ನಿಟ್ಟುಕೊಂಡು ಬರುತ್ತಾರೆ. ಇಂಥವರಿಗೆ ಎಷ್ಟೇ ಎಡರು, ತೊಡರುಗಳು ಬಂದರೂ ಲೆಕ್ಕಿಸದೆ, ಅಂಜದೆ ತಮ್ಮ ಗುರಿಯನ್ನು ಸಾಧಿಸುತ್ತಾರೆ. ಕೋಟಿ–ಕೋಟಿ ಸಂಖ್ಯೆಯ ಸಾಮಾನ್ಯ ಜನರು ಮಾಡಲಾಗದ ಕಾರ್ಯವನ್ನು ತುಲಸೀದಾಸರಂತಹ ಮಹಾತ್ಮರೊಬ್ಬರೇ ಮಾಡಿ ಮುಗಿಸಿದ್ದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

ತುಲಸೀದಾಸರು ಕೊನೆಯುಸಿರು ಎಳೆಯುವಾಗ " ನಾನು ರಾಮನಾಮ ಪ್ರಭಾವವನ್ನು ವರ್ಣಿಸಿ, ಈಗ ಮೌನವನ್ನು ವಹಿಸುತ್ತೇನೆ. ತುಳಸೀ ದಳವನ್ನು 'ತುಲಸೀ (ದಾಸನ)ಯ ಬಾಯಲ್ಲಿಡಿರಿ' ಎಂಬರ್ಥದ ಕೊನೆಯದೊಂದು ದೋಹಾ (ಎರಡು ಸಾಲಿನ ಪದ್ಯ)ವನ್ನು ಉಚ್ಚಾರ ಮಾಡಿ ನಂತರ ಮೌನವನ್ನು ಧರಿಸಿದರು ಎಂಬುದಾಗಿ ಉಲ್ಲೇಖವಿದೆ.

ಪವಿತ್ರ ಚರಿತ್ರೆ, ಪರೋಪಕೃತಿ, ಸತ್ಯನಿಷ್ಠೆ, ಭಗವದ್ಭಕ್ತಿ ಮುಂತಾದ ಸದ್ಗುಣ ಸಮೂಹದಿಂದ ಪ್ರಸಂಚ ಪ್ರಸಿದ್ಧರಾದ ತುಲಸೀದಾಸರು ಗುಣದ ಗಣಿಗಳಾಗಿದ್ದರು.

ಶ್ರೀರಾಮಚರಿತಮಾನಸದ ಸಂಕ್ಷಿಪ್ತ ಸಾರ:

ಶ್ರೀ ತುಲಸೀದಾಸರು ರಚಿಸಿರುವ ಗ್ರಂಥಗಳಲ್ಲೆಲ್ಲಾ ಶ್ರೇಷ್ಠ ಗ್ರಂಥ ರಾಮಚರಿತಮಾನಸ. ಇದನ್ನು ತುಲಸೀದಾಸರು ರಾಮಚಂದ್ರಮೂರ್ತಿಯ ಆಜ್ಞಾನುಸಾರ ಬರೆದುದಾಗಿ ಪ್ರತೀತಿ ಇದೆ. ಅವರು ಅಯೋಧ್ಯೆಯಲ್ಲಿ ಇದ್ದಾಗ ಹಿಂದು ದಿನ ರಾತ್ರಿ ಶ್ರೀರಾಮನು ತುಲಸೀದಾಸರ ಕನಸಿನಲ್ಲಿ ಪ್ರತ್ಯಕ್ಷನಾಗಿ 'ದೇಶಭಾಷೆಯಲ್ಲಿ ರಾಮಾಯಣ ಗ್ರಂಥವನ್ನು ಬರೆ' ಎಂದು ಆಜ್ಞೆ ಮಾಡಲು ತುಲಸೀದಾಸರು ವಿಕ್ರಮ ಶಕೆ ೧೬೩೧ನೆಯ ಚೈತ್ರ ಶುದ್ಧ ಮಂಗಳವಾರದ (ಶ್ರೀರಾಮನವಮಿ) ಶುಭ ದಿನದಲ್ಲಿ ಪ್ರಾರಂಭಿಸಿ ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡಗಳನ್ನು ಅಲ್ಲೇ ಬರೆದರು. ಮುಂದೆ ಅಲ್ಲಿಯ ವಿದ್ವಾಂಸರೊಂದಿಗೆ ವಿವಾದವುಂಟಾಗಲು, ಅಲ್ಲಿ ಇರಲು ಇಷ್ಟಪಡದೆ ಕಾಶಿಗೆ ಹೊರಟು, ಅಸ್ಸಿಘಾಟಿನ ಲೋಲಾರ್ಕ ಕುಂಡದ ಹತ್ತಿರ ವಾಸಿಸಿದ್ದಾಗ ಕಿಷ್ಕಿಂಧಾಕಾಂಡ, ಸುಂದರಕಾಂಡ, ಉತ್ತರಕಾಂಡಗಳನ್ನು ಬರೆದು ಪೂರೈಸಿದರು. ಅಸ್ಸಿಘಾಟಿನಲ್ಲಿ ಹನುಮಾನ್ ಮೂರ್ತಿಯೊಂದು ತುಲಸೀದಾಸರಿಂದ ಸ್ಥಾಪಿತವಾಗಿ ಈಗಲೂ ಪೂಜೆಗೊಳ್ಳುತ್ತಿದೆ.

ಶ್ರೀರಾಮಚರಿತ ಮಾನಸದ ಗ್ರಂಥದ ಹಿರಿಮೆಯನ್ನು ಹೆಚ್ಚಿಸುವ ಒಂದು ಕಥೆಯು ಶ್ರೀ ತುಲಸೀದಾಸ ಚರಿತ್ರೆಯಲ್ಲಿ ವ್ಯಕ್ತವಾಗಿದೆ. ಲಂಕೆಯಲ್ಲಿ ನಡೆದ ರಾಮ ರಾವಣರ ಸಮರ ಕಾಲದಲ್ಲಿ ಲಕ್ಷ್ಮಣನಿಗೆ ರಾವಣನಿಂದ ಶಕ್ತಿ ಪ್ರಯೋಗವಾದ ಸಂದರ್ಭದಲ್ಲಿ ಶ್ರೀರಾಮನು ತನ್ನ ಭಕ್ತನಾದ ಹನುಮಂತನನ್ನು ಕುರಿತು ಇತರ ಸುದ್ದಿಗಳನ್ನು ಹೇಳುತ್ತಾ ಪ್ರಸಂಗಾನುಸಾರ–'ನಾನು ವಾಲ್ಮೀಕಿ

CC-O. In Public Domain. Digitized by eGangotri

ರಾಮಾಯಣದಲ್ಲಿ ಹೇಗೆ ವರ್ಣಿತವಾಗಿದೆಯೋ ಅದಕ್ಕೆ ಸರಿಯಾಗಿ ನಡೆಯಲುಳ್ಳವನು' ಎಂದನು. ಆಗ ಹನುಮಂತನು ಸವಿಾಪದಲ್ಲಿದ್ದ ಶಿಲೆಗಳ ಮೇಲೆ ತನ್ನ ಉದುಸಿರಿನಿಂದ ರಾಮಯಣ ಕಥೆಯನ್ನು ಬರೆದು, ಅದನ್ನು ರಾಮನಲ್ಲಿಗೆ ತಂದು ಅದರ ಮೇಲೆ ಸಹಿ ಮಾಡಬೇಕೆಂದು ರಾಮನನ್ನು ಪ್ರಾರ್ಥಿಸಿದನು.

ಆದಕ್ಕೆ ರಾಮನು 'ನಾನು ವಾಲ್ಮೀಕಿಯ ರಾಮಾಯಣಕ್ಕೆ ರುಜು ಮಾಡಿರುವುದರಿಂದ ಇದಕ್ಕೂ ಸಹಿ ಮಾಡಲು ಆಗುವುದಿಲ್ಲ. ವಾಲ್ಮೀಕಿಯ ಬಳಿ ಹೋಗಿ ಸಹಿ ಮಾಡಿಸಿಕೊ' ಎನ್ನಲು, ಹನುಮಂತನು ವಾಲ್ಮೀಕಿಯ ಸನ್ನಿಧಿಗೆ ಹೋಗಿ ಇದಕ್ಕೆ ಸಹಿ ಮಾಡೆನ್ನಲು ವಾಲ್ಮೀಕಿಯ ಹನುಮಾನಾತ್ಮಕ ರಾಮಾಯಣನನ್ನು ಓದಿ ನೋಡಿ, ತಾನು ಬರೆದುದಕ್ಕಿಂತಲೂ ಅದು ಉತ್ತಮ ವಾಗಿರುವುದರಿಂದ, ಅದು ಪ್ರಚಾರಕ್ಕೆ ಬಂದರೆ ತನ್ನ ರಾಮಾಯಣಕ್ಕೆ ಯಶಸ್ಸಿನ ದೃಷ್ಟಿಯಿಂದ ಕುಂದು ಬರುವುದೆಂದು ಯೋಚಿಸಿ ಹನುಮಂತನನ್ನು ವಿವಿಧ ರೀತಿಯಲ್ಲಿ ಸ್ತೋತ್ರ ಮಾಡಿದಾಗ, ಆಂಜನೇಯನು ಪ್ರಸನ್ನನಾಗಿ, ಬೇಕಾದ ವರವನ್ನು ಬೇಡೆನ್ನಲು, ವಾಲ್ಮೀಕಿಯು 'ನಿನ್ನ ರಾಮಾಣುಣವನ್ನು ಸಮುದ್ರದಲ್ಲಿ ಹಾಕಿ ಮುಳುಗಿಸಿಬಿಡೆಂದು ಕೇಳಿಕೊಂಡನು. ಅದಕ್ಕೆ ಹನುಮಂತನು 'ನಿನ್ನಿಷ್ಟದಂತೆ ಆಗಬಹುದು. ಆದರೆ ಕಲಿಯುಗದಲ್ಲಿ ತುಲಸೀ ಎಂಬೊಬ್ಬ ಬ್ರಾಹ್ಮಣೋತ್ತಮನ ನಾಲಿಗೆಯಲ್ಲಿ ಕುಳಿತು, ನಾನು ದೇಶಭಾಷೆ ಯಲ್ಲಿ ಒಂದು ರಾಮಾಯಣ ಗ್ರಂಥವನ್ನು ಬರೆಯಿಸುತ್ತೇನೆ. ಅದರಿಂದ ನಿನ್ನ ರಾಮಾಯಣವು ನಷ್ಟಪ್ರಾಯವಾಗುವುದು' ಎಂದು ಹೇಳಿ ಹೊರಟು ಹೋದನು.

ತುಲಸೀದಾಸ ರಾಮಾಯಣಕ್ಕೂ–ವಾಲ್ಮೀಕಿ ರಾಮಾಯಣಕ್ಕೂ ಕೆಲವು ಕಡೆ ಅಂತರಗಳಿವೆ. ವಾಲ್ಮೀಕಿ ರಾಮಾಯಣದಲ್ಲಿ ವಿಸ್ತಾರವಾಗಿರುವ ಭಾಗಗಳು, ಇದರಲ್ಲಿ ಸಂಕ್ಷಿಪ್ತವಾಗಿಯೂ ಅಲ್ಲಿ ಸಂಕ್ಷಿಪ್ತವಾಗಿರುವ ಭಾಗಗಳು ಇಲ್ಲಿ ವಿಸ್ತಾರವಾಗಿಯೂ ವರ್ಣಿತವಾಗಿವೆ. ತುಲಸೀದಾಸರ ರಾಮಾಯಣಕ್ಕೆ ವಾಲ್ಮೀಕಿ ರಾಮಾಯಣ, ಆಧ್ಯಾತ್ಮ ರಾಮಾಯಣ ಸ್ವಲ್ಪಮಟ್ಟಿಗೆ ಆಧಾರ ವಾಗಿದೆ.

'ರಾಮಚರಿತಮಾನಸ'ದೆಂದರೆ 'ಶ್ರೀರಾಮಚಂದ್ರನ ವಿವಿಧ ಲೀಲೆಗಳ ವರ್ಣನೆಯುಳ್ಳ ಮಾನಸ ಸರೋವರ'ವೆಂದು ಅರ್ಥವಾಗುತ್ತದೆ. ಆದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಇದನ್ನು ಶ್ರೀ ತುಲಸೀದಾಸ ರಾಮಾಯಣವೆಂದು ಕರೆಯುವುದು ವಾಡಿಕೆಯಾಗಿವೆ. ವಾಲ್ಮೀಕಿ ರಾಮಾಯಣ ಕಥಾ ಕ್ರಮವನ್ನು ತುಲಸೀದಾಸರು ತಮ್ಮ ರಾಮಾಯಣದಲ್ಲಿ ವ್ಯಕ್ತ ಪಡಿಸಿದ್ದರೂ ಇದರಲ್ಲಿನ ಶ್ರೀರಾಮಾಕಥೆಯು ಹೊಸ ಮಾದರಿಯಲ್ಲಿ ಬಹು ಚಿತ್ತಾಕರ್ಷವಾಗಿ ರಚಿತವಾಗಿದೆ. ಮಹಾ ಪುಣ್ಯದಾಯಕವಾದ ಶ್ರೀರಾಮ ಕಥೆಯನ್ನು ಸಂಸ್ಕೃತ ಭಾಷೆಯಲ್ಲಿ ಬರೆಯದೆ ಜನರ ನಿತ್ಯ ವ್ಯವಹಾರದ ಭಾಷೆಯಾದ ಹಿಂದಿಯಲ್ಲಿ ರಚಿಸಿದ್ದಕ್ಕಾಗಿ ಆಗಿನ ಸಂಸ್ಕೃತದ ವಿದ್ವಾಂಸರು ತುಲಸೀದಾಸರನ್ನು ಆಕ್ಷೇಪಿಸಿದ್ದರು. ಕಾಶಿಗೆ ಬಂದು ಶ್ರೀ ರಾಮಾಯಣ ಗ್ರಂಥವನ್ನು ಸಂಪೂರ್ಣಗೊಳಿಸಿದ ತರುವಾಯ ಹಿಂದು ದಿನ ಅವರು ಮಣಿಕರ್ಣಿಕಾ ಘಟ್ಟದಲ್ಲಿ ಸ್ನಾನ ಮಾಡುತ್ತಿದ್ದಾಗ ಹಿಬ್ಬ ಸಂಸ್ಕೃತ ಪಂಡಿತನು ಅವರ ಬಳಿಗೆ ಬಂದು 'ರಾಮಾಯಣದಂತಹ ಶ್ರೇಷ್ಠ ಗ್ರಂಥವನ್ನು ದೇವಭಾಷೆಯಲ್ಲಿ ಬರೆಯದೆ ಹೊಲಸು ಹಿಂದಿಯಲ್ಲಿ ಏಕೆ ಬರೆದೆ' ಎಂಬುದಾಗಿ ಪ್ರಶ್ನಿಸಲು ತುಲಸೀದಾಸರು 'ಸ್ವಾಮಿ, ಪವಿತ್ರವಾದ ಸಂಸ್ಕೃತದಲ್ಲಿ ನಾಯಕ–ನಾಯಿಕಾ ಪ್ರಣಯ ವರ್ಣನಾದಿ ಹೊಲಸು ವಿಷಯಗಳನ್ನು ಬರೆಯುವುದಕ್ಕಿಂತಲೂ ದೇಶಭಾಷೆಯಲ್ಲಿ ಧರ್ಮಗ್ರಂಥವನ್ನು ಬರೆಯುವುದು ಅಸಹ್ಯವಲ್ಲ. ಚಿನ್ನದ ಬಟ್ಟಲಿನಲ್ಲಿ ವಿಷವನ್ನೂ ಮಣ್ಣಿನ ಬಟ್ಟಲಿನಲ್ಲಿ ಅಮೃತವನ್ನೂ ಇಟ್ಟು ತೆಗೆದುಕೊಳ್ಳಹೇಳಿದರೆ ತಾವು ಯಾವುದನ್ನು ಇಷ್ಟ ಪಡುವಿರಿ' ಎಂದರು.

ಇದನ್ನು ಕೇಳಿದ ಆ ಪಂಡಿತನು ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ಹೊರಟು ಹೋದನು. ಆದರೆ ಇತರ ಪಂಡಿತರಿಗೆ ಈ ಉತ್ತರವು ತೃಪ್ತಿ ತಂದು ಕೊಡಲಿಲ್ಲ. ಶ್ರೀ ವಿಶ್ವನಾಥನು ಆ ರಾಮಾಯಣ ಗ್ರಂಥವನ್ನು ಸ್ವೀಕರಿಸಿದರೆ ಮಾತ್ರ ಅದು ತಮ್ಮಿಂದ ಗೌರವಿಸಲ್ಪಡುವುದು ಎಂದು ತಿಳಿಸಿದರು. ತುಲಸೀದಾಸರು ಅದಕ್ಕೂ ಒಪ್ಪಿ, ಆ ಗ್ರಂಥವನ್ನು ಹಿಂದು ದಿನ ರಾತ್ರಿ ವಿಶ್ವನಾಥನ ದೇವಾಲಯದಲ್ಲಿರಿಸಿದ್ದರು. ಮಾರನೆಯ ಪ್ರಾತಃಕಾಲವಲ್ಲಿದ್ದು ನೋಡಲು ಅದರ ಮೇಲೆ ವಿಶ್ವನಾಥನು ತನ್ನ ಒಪ್ಪಿಗೆ ವಚನವನ್ನು ಬರೆದಿದ್ದುದನ್ನು ಕಂಡು ಸಕಲರೂ ಆಶ್ಚರ್ಯಪಟ್ಟು, ಅದನ್ನು ದೈವದತ್ತವಾದುದೆಂದೇ ಒಪ್ಪಿಕೊಂಡರು. ಅಂದಿನಿಂದ ಅದು ಪಂಡಿತ ಪಾಮರರೆಂಬ ಅಂತರವಿಲ್ಲದೆ ಸರ್ವಜನಾದರಣೀಯವಾದ ಗ್ರಂಥವಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ವಚನ ಭಾಗವತ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮುದ್ರಣಾಲಯ ಮೈಸೂರು
೫,೦೦೦ ಪ್ರತಿಗಳು ೧೯೮೭

Sri Vidyabharathi Book Centre, Sringeri